KADK610011362024

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ರವರ ನ್ಯಾಯಾಲಯ, ಮೂಡಬಿದ್ರೆ**

**ಉಪಸ್ಥಿತರು:- ಶ್ರೀಮತಿ ಕಾವೇರಮ್ಮ ಎಂ., *ಬಿ.ಎ, ಎಲ್‌ಎಲ್.ಬಿ,***
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ.

**ದಿನಾಂಕಃ 18 ನೇ ಮಾಹೆಯಾನ ಮಾರ್ಚ್, 2025**

**O.S./183/2024**

**ವಾದಿಃ**

ಶ್ರೀ ಜೆರೋಮ್ ಸ್ಟೀಫನ್ ಕೊರಿಯ
ಪ್ರಾಯ ಸುಮಾರು 48 ವರ್ಷ,
ಬಿನ್ ದಿವಂಗತ ಜೋಸೇಫ್ ಕೊರಿಯ,
ವಿಳಾಸಃ ಜೆ.ಎಸ್.ವಿಲ್ಲಾ,
ಮಂಜನಬೈಲು ಹೌಸ್,
ಕಲ್ಲಮುಂಡ್ಕೂರು ಗ್ರಾಮ,
ಮೂಡಬಿದ್ರೆ ತಾಲ್ಲೂಕು.

**(ಪ್ರತಿನಿಧಿಸಿದವರುಃ ಶ್ರೀ ಶರತ್ ಡಿ.ಶೆಟ್ಟಿ, ವಕೀಲರು)**

**-ವಿರುದ್ಧ-**

**ಪ್ರತಿವಾದಿಗಳುಃ**

1) ಶ್ರೀ ಫ್ರಾನ್ಸಿಸ್ ಕುವೆಲ್ ಯಾನೆ
ಪ್ರಾನ್ಸಿಸ್ ತೌರೋ
ಪ್ರಾಯ ಸುಮಾರು 64 ವರ್ಷ,
ಬಿನ್ ಲಿಗೋರಿ ತೌರೋ,
ವಿಳಾಸಃ ಡೋರ್ ನಂ.4-93,
ಲಿಲ್ಲಿ ಡಿಸೋಜ ಕಂಪೌಂಡ್,
ಗುಡ್ಡೆ ತೋಟ, ನಾಗುರಿ,
ಮಂಗಳೂರು ತಾಲ್ಲೂಕು, ದ.ಕ.

2) ಶ್ರೀ ಉಮನಾಥ್
ಬಿನ್ ದಿವಂಗತ ರಾಮಚಂದ್ರ,
ವಯಸ್ಸು ಸುಮಾರು 47 ವರ್ಷ,
ವಿಳಾಸಃ ಡೋರ್ ನಂ.3-34,
ನಾಗರಕಟ್ಟೆ ರಸ್ತೆ, ಗರಡಿ ಮನೆ ಬಳಿ,
ಮಾರ್ಪಾಡಿ ಗ್ರಾಮ,
ಮೂಡಬಿದ್ರೆ ತಾಲ್ಲೂಕು, ದ.ಕ.

**(ಪ್ರತಿನಿಧಿಸಿದವರು: ಪ್ರ.1 ನೇಯವರಿಗೆ-ಶ್ರೀ ಮಯೂರ ಕೀರ್ತಿ, ವಕೀಲರು,
ಪ್ರ.2 ನೇಯವರಿಗೆ-ಶ್ರೀ ರವೀಂದ್ರನಾಥ ಪಿ.ಎಸ್., ವಕೀಲರು)**

**ಮ.ಅ.ಸಂ: 2/2024 ರಲ್ಲಿ**

ಶ್ರೀ ಜೆರೋಮ್ ಸ್ಟೀಫನ್ ಕೊರಿಯ ... ವಾದಿ/ಅರ್ಜಿದಾರರು

-ವಿರುದ್ಧ -

ಶ್ರೀ ಉಮನಾಥ್ ... 2 ನೇ ಪ್ರತಿವಾದಿ/ ಎದುರುದಾರರು

## ಮಧ್ಯಂತರ ಅರ್ಜಿ ಸಂಖ್ಯೆ 2 ರ ಮೇಲಿನ ಆದೇಶ

ಅರ್ಜಿದಾರರು/ವಾದಿ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ಹಾಗೂ ಕಲಂ 151 ರಡಿಯಲ್ಲಿ ಸಲ್ಲಿಸಿ, ದಾವೆ ವಿಲೇವಾರಿ ಆಗುವವರೆಗೂ 2 ನೇ ಪ್ರತಿವಾದಿಯಾಗಲೀ, ಅವರ ಕಡೆ ವ್ಯಕ್ತಿಗಳಾಗಲೀ, ಏಜೆಂಟರಾಗಲೀ, ಕೆಲಸಗಾರರಾಗಲೀ ಮತ್ತು ಅವರ ಅಡಿಯಲ್ಲಿ ಕ್ಲೇಮು ಮಾಡುವ ಯಾರೇ ವ್ಯಕ್ತಿಗಳಾಗಲೀ, ದಾವಾ 'ಎ' ಅನುಸೂಚಿತ ಸ್ವತ್ತಿನಲ್ಲಿ ಕೆಂಪು ಲ್ಯಾಟರೈಟ್ ಕಲ್ಲಿನ ಕೋರೆ ವ್ಯವಹಾರಗಳನ್ನು ನಡೆಸದಂತೆ/ನಿರ್ವಹಿಸದಂತೆ ಅಥವಾ ದಾವಾ ಸ್ವತ್ತಿನ ಯಾವುದೇ ಭಾಗವನ್ನು ಪರಭಾರೆ, ಅಡಮಾನ, ಋಣಭಾರ ಮಾಡದಂತೆ ಅಥವಾ ಯಾವುದೇ ನಿರ್ಮಾಣದ ಕೆಲಸಗಳನ್ನು ಮಾಡದಂತೆ, ಬೆಳೆದಿರುವ ಮರ-ಗಿಡಗಳನ್ನು ಕಡಿಯದಂತೆ ಸದರಿ ಸ್ವತ್ತಿನ ಮೇಲೆ ಮೂರನೇ ವ್ಯಕ್ತಿಗಳ ಹಿತಾಸಕ್ತಿಯನ್ನು ರಚಿಸದಂತೆ ಅಥವಾ ಸದರಿ ಸ್ವತ್ತಿಗೆ ಯಾವುದೇ ನಷ್ಟ ಮತ್ತು ಹಾನಿ ಮಾಡದಂತೆ 2 ನೇ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ಮಧ್ಯಂತರ ತಡೆಯಾಜ್ಞೆಯನ್ನು ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ.

**2. ಮಧ್ಯಂತರ ಅರ್ಜಿಯ ಸಂಕ್ಷಿಪ್ತ ಸಾರಾಂಶವೇನೆಂದರೆ :-**

ಅರ್ಜಿಯೊಂದಿಗೆ ವಾದಿ ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಈ ಮುಂದಿನಂತೆ ಹೇಳಿರುತ್ತಾರೆ. ದಾವಾ 'ಎ' ಅನುಸೂಚಿತ ಸ್ವತ್ತು ಮೂಲತಃ ವಾದಿಯ ಅಜ್ಜ ದಿವಂಗತ ಫ್ರಾನ್ಸಿಸ್ ಕೊರಿಯ ರವರಿಗೆ ಸೇರಿದ್ದಾಗಿರುತ್ತದೆ, ವಾದಿಯು, ವಾದಿಯ ಅಜ್ಜನ ಏಳು ಮಕ್ಕಳ ಪೈಕಿ ಒಬ್ಬರಾದ ದಿವಂಗತ ಜೋಸೇಫ್ ಕೊರಿಯರವರ ಮಗನಾಗಿರುತ್ತಾರೆ, ಫ್ರಾನ್ಸಿಸ್ ಕೊರಿಯರವರು ಮರಣ ಶಾಸನವಿಲ್ಲದೆ ತನ್ನ ಏಳು ಜನ ಮಕ್ಕಳನ್ನು ಬಿಟ್ಟು ಮರಣ ಹೊಂದಿದ್ದು ಅವರೆಲ್ಲರೂ ತಮ್ಮ ತಮ್ಮ ಕಾನೂನಾತ್ಮಕ ವಾರಾಸ್ಸುದಾರರನ್ನು ಬಿಟ್ಟು ಮರಣ ಹೊಂದಿರುತ್ತಾರೆ, ವಾದಿಯ ತಂದೆ ಜೋಸೇಫ್ ಕೊರಿಯ ರವರು ವಾದಿಯನ್ನು ಒಳಗೊಂಡು ಒಟ್ಟು ಏಳು ಜನ ಮಕ್ಕಳನ್ನು ಬಿಟ್ಟು ಮರಣ ಹೊಂದಿರುತ್ತಾರೆ, ಆದಕಾರಣ ವಾದಿ ಮತ್ತು ವಾದಿಯ ತಂದೆಯ ಇತರ ಮಕ್ಕಳು

ಜಂಟಿಯಾಗಿ ದಾವಾ 'ಎ' ಅನುಸೂಚಿತ ಸ್ವತ್ತಿನಲ್ಲಿ **1/7**ನೇ ಭಾಗಾಂಶದ ಹಕ್ಕಿಗೆ ಅರ್ಹರಾಗಿರುತ್ತಾರೆ, ಪ್ರಸ್ತುತ ದಾವೆಯನ್ನು ವಾದಿಯು ಇಡೀ ಕುಟುಂಬಕ್ಕೆ ಪ್ರತಿವಾದಿಗಳಿಂದ ಆಗುವ ನಷ್ಟ ಮತ್ತು ಹಾನಿಯಿಂದ ಆಸ್ತಿಯನ್ನು ರಕ್ಷಿಸುವ ತುರ್ತು ಪರಿಹಾರ ಕೋರಿ ಸಲ್ಲಿಸಲಾಗಿದೆ, ಪ್ರತಿವಾದಿಗಳು ದಾವಾಸ್ತಿಗೆ ಅಪರಿಚಿತ ವ್ಯಕ್ತಿಗಳಾಗಿದ್ದು ಸಂಬಂಧಿತ ನೋಂದಣಿ ಪ್ರಾಧಿಕಾರದ ಮುಂದೆ ವ್ಯಕ್ತೀಕರಣ (impersonation) ಮಾಡಿ ತಪ್ಪಾಗಿ ಪ್ರತಿನಿಧಿಸುವ ಮೂಲಕ **1**ನೇ ಪ್ರತಿವಾದಿಯು ಮೋಸದಿಂದ ಮತ್ತು ಕಾನೂನುಬಾಹಿರವಾಗಿ ದಿನಾಂಕ **29-07-2024** ರ ನೋಂದಾಯಿತ ಕ್ರಯಪತ್ರ ಎಂಬ ಹೆಸರಿನ ನಕಲಿ ದಾಖಲೆಯನ್ನು **2**ನೇ ಪ್ರತಿವಾದಿಯ ಪರವಾಗಿ ಜಾರಿಗೊಳಿಸಿರುತ್ತಾರೆ, ಎಂದು ಹೇಳಿರುತ್ತಾರೆ. **1**ನೇ ಪ್ರತಿವಾದಿಯು ವಂಚಕನಾಗಿದ್ದು ದಿನಾಂಕ **29-07-2024** ರಂದು ದಸ್ತಾವೇಜು ಸಂಖ್ಯೆ **MDB-1-01784-2024-25** ರಂತೆ ನೋಂದಣಿಯಾಗಿರುವ ಕ್ರಯಪತ್ರದಲ್ಲಿ ವಾದಿಯ ಅಜ್ಜ ದಿವಂಗತ ಫ್ರಾನ್ಸಿಸ್ ಕೊರಿಯಾ ಎಂದು ಮಾರಾಟಗಾರನಂತೆ ವ್ಯಕ್ತೀಕರಣ (impersonation) ಮಾಡಿ ನಕಲಿ ದಾಖಲೆಗಳನ್ನು ಸೃಷ್ಟಿಸುವ ಮೂಲಕ ಸಂಬಂಧಪಟ್ಟ ಪ್ರಾಧಿಕಾರವನ್ನು ದಾರಿ ತಪ್ಪಿಸಿರುತ್ತಾರೆ, ದಿನಾಂಕ **10-04-1924** ರಂದು **DR No.315/33** ರಂತೆ ದಾವಾಸ್ತಿ ಮಂಜೂರಾಗಿದ್ದ ಫ್ರಾನ್ಸಿಸ್ ಕೊರಿಯ ರವರು ಬಹಳ ಹಿಂದೆಯೇ ಮರಣ ಹೊಂದಿರುತ್ತಾರೆ. ಆದರೆ ಸದರಿ ಕ್ರಯಪತ್ರದಲ್ಲಿ ಮೇಲ್ಕಂಡ ದಿನಾಂಕದಂದು ದಾವಾಸ್ತಿಯು ತನಗೆ ಮಂಜೂರಾಗಿರುತ್ತದೆ ಎಂದು **1**ನೇ ಪ್ರತಿವಾದಿಯು ಸುಳ್ಳಾಗಿ ಹೇಳಿರುತ್ತಾರೆ, ಒಂದು ವೇಳೆ ದಾವಾಸ್ತಿಯು **1**ನೇ ಪ್ರತಿವಾದಿಗೆ ಮಂಜೂರಾಗಿರುತ್ತಿದ್ದರೆ ಅವರ ವಯಸ್ಸು ಈಗ ಕನಿಷ್ಠ **118** ವರ್ಷಗಳಾಗಿರಬೇಕಿತ್ತು, ಆದರೆ, **1**ನೇ ಪ್ರತಿವಾದಿಯು ಕ್ರಯಪತ್ರದಲ್ಲಿ ತನ್ನ ವಯಸ್ಸನ್ನು **64** ವರ್ಷ ಎಂದು ನಮೂದಿಸಿದ್ದಾರೆ, ಆದಕಾರಣ ಸದರಿ ಕ್ರಯಪತ್ರವು, ಪ್ರತಿವಾದಿಗಳು ಹೆಚ್ಚಿನ ಲಾಭ ಗಳಿಸುವ ಉದ್ದೇಶದಿಂದ ಮಾಡಿರುವ ಕಾನೂನುಬಾಹಿರ, ಸೃಷ್ಟಿ ಮಾಡಿದ ನಕಲಿ ದಾಖಲೆಯಾಗಿರುತ್ತದೆ, ಎಂದು ಹೇಳಿರುತ್ತಾರೆ.

**3.** ಮುಂದುವರೆದು, ಗಣಕೀಕೃತ ಪಹಣಿಪತ್ರಿಕೆಯ **9**ನೇ ಕಾಲಂನಲ್ಲಿ ಹೆಸರನ್ನು ಫ್ರಾನ್ಸಿಸ್ ಕೊರಿಯ ಬದಲಿಗೆ ಫ್ರಾನ್ಸಿಸ್ ಕುವೆಲ್ ಎಂದು ತಪ್ಪಾಗಿ ನಮೂದಿಸಿರುವುದರ ಅನಗತ್ಯ ಲಾಭವನ್ನು ಪ್ರತಿವಾದಿಗಳು ಪಡೆದುಕೊಂಡಿರುವಂತೆ ತೋರುತ್ತದೆ, ಆದರೆ ಕೈಬರಹದ ಪಹಣಿಪತ್ರಿಕೆಯಲ್ಲಿ ಹೆಸರು ಸರಿಯಾಗಿ ನಮೂದಾಗಿರುತ್ತದೆ, ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ದಾವಾಸ್ತಿಯನ್ನು ಕಬಳಿಸಿ ಲಾಭಗಳಿಸುವ ಸಲುವಾಗಿ ಮತ್ತು ವಾದಿ ಹಾಗೂ ವಾದಿಯ ಕುಟುಂಬದವರಿಗೆ ಹೆಚ್ಚಿನ ನಷ್ಟ ಮತ್ತು ತೊಂದರೆಯನ್ನು ಉಂಟುಮಾಡುವ ಸಲುವಾಗಿ ಸುಳ್ಳು ಮತ್ತು ಮೋಸದ ದಾಖಲೆಯನ್ನು ಮಾಡುವಲ್ಲಿ ಇಬ್ಬರೂ ಪ್ರತಿವಾದಿಗಳು ಸಮಾನವಾಗಿ ತಪ್ಪಿತಸ್ಥರಾಗಿರುತ್ತಾರೆ, ಪ್ರತಿವಾದಿಗಳು ಸೃಷ್ಟಿಸಿರುವ ಸದರಿ ಕ್ರಯಪತ್ರವು ಕಾನೂನುಬಾಹಿರ ಮತ್ತು ಅಮಾನ್ಯ ದಾಖಲೆಯಾಗಿದ್ದು, ಅದು ವಾದಿಯ ಮೇಲೆ ಬಂಧಿತವಾಗುವುದಿಲ್ಲ, ಆದ್ದರಿಂದ ಸದರಿ ಕ್ರಯಪತ್ರವು ಮಾನ್ಯವಲ್ಲದ

ದಾಖಲೆ ಮತ್ತು ವಾದಿಯ ಮೇಲೆ ಬಂಧಿತವಾಗುವುದಿಲ್ಲ ಎಂದು ಘೋಷಿಸಲು ಅರ್ಹವಾಗಿರುತ್ತದೆ, ಎಂದು ಹೇಳಿರುತ್ತಾರೆ. ಅಂತೆಯೇ ಪ್ರತಿವಾದಿಗಳನ್ನು, ದಾವಾಸ್ತಿಗೆ ಯಾವುದೇ ಹಾನಿ ಮತ್ತು ನಷ್ಟ ಉಂಟು ಮಾಡದಂತೆ ತಡೆಯಬೇಕಾಗಿರುತ್ತದೆ, ಸದರಿ ಅಕ್ರಮ ಕ್ರಯಪತ್ರವನ್ನು ಸೃಷ್ಟಿಸಿದ ನಂತರ ಪ್ರತಿವಾದಿಗಳು ದಾವಾಸ್ತಿಯಲ್ಲಿ ಲ್ಯಾಟರೈಟ್ ಕಲ್ಲಿನ ಕೋರೆ ನಡೆಸಲು ಪ್ರಾಧಿಕಾರಗಳ ಮೂಲಕ 2 ನೇ ಪ್ರತಿವಾದಿಯ ಹೆಸರಿನಲ್ಲಿ ಕಾನೂನುಬಾಹಿರವಾಗಿ ದಾಖಲೆಗಳನ್ನು ಸಹ ಸೃಷ್ಟಿಸಿದ್ದಾರೆ, 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಜೊತೆ ಸೇರಿ ಯಾವುದೇ ಹಕ್ಕು ಇಲ್ಲದೆ ಸದರಿ ಕಾನೂನುಬಾಹಿರ ಕ್ರಯಪತ್ರದ ಆಧಾರದ ಮೇಲೆ ಕಾನೂನುಬಾಹಿರವಾಗಿ ದಾವಾಸ್ತಿಯಲ್ಲಿ ಲ್ಯಾಟರೈಟ್ ಕಲ್ಲಿನ ಕೋರೆ ವ್ಯವಹಾರಗಳನ್ನು ನಡೆಸುತ್ತಿದ್ದಾರೆ, ಆದಕಾರಣ ದಾವಾಸ್ತಿಯಲ್ಲಿ ಕೋರೆ ವ್ಯವಹಾರವನ್ನು ನಡಸೆದಂತೆ 2 ನೇ ಪ್ರತಿವಾದಿಯನ್ನು ತಾತ್ಕಾಲಿಕ ಮತ್ತು ಶಾಶ್ವತ ತಡೆಯಾಜ್ಞೆ ಮೂಲಕ ನಿರ್ಬಂಧಿಸಬೇಕಾಗಿದೆ, ಇಲ್ಲದಿದ್ದಲ್ಲಿ ವಾದಿ ಮತ್ತು ವಾದಿಯ ಕುಟುಂಬವು ಪರಿಹರಿಸಲಾಗದ ನಷ್ಟ, ತೊಂದರೆ ಮತ್ತು ಅನಾನುಕೂಲಕ್ಕೆ ಈಡಾಗಬೇಕಾಗುತ್ತದೆ, ವಾದಿಯ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಇದ್ದು, ಅನುಕೂಲತೆಯ ಒಲವು ಸಹ ವಾದಿಯ ಪರವಾಗಿರುತ್ತದೆಂದು, ಹೇಳುತ್ತಾ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವಂತೆ ಕೇಳಿಕೊಂಡಿರುತ್ತಾರೆ.

**4.** ದಾವಾ ಸಮನ್ಸ್ ಜಾರಿಯಾದ ನಂತರ ಪ್ರತಿವಾದಿಗಳು ವಕೀಲರೊಂದಿಗೆ ನ್ಯಾಯಾಲಯಕ್ಕೆ ಹಾಜರಾಗಿದ್ದು 2 ನೇ ಪ್ರತಿವಾದಿಯು ಪ್ರಸ್ತುತ ಅರ್ಜಿಗೆ ತನ್ನ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

**5.** 2 ನೇ ಪ್ರತಿವಾದಿಯು ತನ್ನ ಆಕ್ಷೇಪಣೆಯಲ್ಲಿ, ಪುನರಾವರ್ತನೆಯನ್ನು ತಪ್ಪಿಸಲು ಆಕ್ಷೇಪಣೆಯ ಸಂಗತಿಗಳನ್ನು ಪರಿಗಣಿಸುವಾಗ ಪ್ರತಿವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಕೂಡಿಸಿ ಪರಿಗಣಿಸಬೇಕಾಗಿ ಕೋರಿರುತ್ತಾರೆ. ಮುಂದುವರೆದು, ಅರ್ಜಿಯ ಲಗತ್ತು ಪ್ರಮಾಣ ಪತ್ರದ ಹೆಚ್ಚಿನ ಸಂಗತಿಗಳನ್ನು ಅಲ್ಲಗಳೆಯುತ್ತಾ ಈ ಮುಂದಿನಂತೆ ಹೇಳಿರುತ್ತಾರೆ. ಪ್ರಸ್ತುತ ಅರ್ಜಿಯು ವಾಸ್ತವಾಂಶದಿಂದಾಗಲೀ ಅಥವಾ ಕಾನೂನಿನಡಿಯಲ್ಲಾಗಲೀ ಊರ್ಜಿತವಾಗತಕ್ಕದ್ದಲ್ಲ, 2 ನೇ ಪ್ರತಿವಾದಿಗೆ ಸ್ವತ್ತಿನ ಮಾರುಕಟ್ಟೆ ಮೌಲ್ಯ, ಒಡತನ ಮತ್ತು ಸ್ಥಳವು ತೃಪ್ತಿದಾಯಕವಾದ ನಂತರ ನೋಂದಾಯಿತ ಕ್ರಯಪತ್ರದ ಮೂಲಕ 1 ನೇ ಪ್ರತಿವಾದಿಯಿಂದ ಸದರಿ ಸ್ವತ್ತನ್ನು ಖರೀದಿಸಿ, ಪಹಣಿಪತ್ರಿಕೆಯನ್ನು ತನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ, ಸದರಿ ಸ್ವತ್ತು ಲಾಟರೈಟ್ ಕಲ್ಲಿನ ಸ್ಥಳವಾಗಿದ್ದು ಕೃಷಿಗೆ ಯೋಗ್ಯವಲ್ಲದ ಜಾಗವಾಗಿರುತ್ತದೆ, ಭೂ-ವಿಜ್ಞಾನ ಇಲಾಖೆ ಮತ್ತು ತಾಂತ್ರಿಕ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ತದನಂತರ ಲಾಟರೈಟ್ ಕಲ್ಲನ್ನು ತೆಗೆಯಲು ಪರವಾನಿಗೆಯನ್ನು ನೀಡಿರುತ್ತಾರೆ, 2 ನೇ ಪ್ರತಿವಾದಿಯು ಸ್ವತ್ತಿನ ಕಾನೂನಾತ್ಮಕ ಮಾಲೀಕರಾಗಿ ಸ್ವಾಧೀನದಲ್ಲಿರುತ್ತಾರೆ, ನಿಜವಾದ ಮಾಲೀಕರ ವಿರುದ್ಧ ತಡೆಯಾಜ್ಞೆ ನೀಡುವಂತಿಲ್ಲ, ಒಂದು ವೇಳೆ ತಡೆಯಾಜ್ಞೆ ಆದೇಶವನ್ನು

ಮುಂದುವರಿಸಿದರೆ ಕಾನೂನಾತ್ಮಕ ಮಾಲೀಕರಾಗಿರುವ 2 ನೇ ಪ್ರತಿವಾದಿಯನ್ನು ತನ್ನ ಸ್ವಂತ ಜಾಗವನ್ನು ಅನುಭವಿಸುವುದರಿಂದ ತಡೆದಂತಾಗುತ್ತದೆ, ತಡೆಯಾಜ್ಞೆಯನ್ನು ತೆರವು ಮಾಡುವ ದಿನನಿತ್ಯದ ವಿಳಂಬವು 2 ನೇ ಪ್ರತಿವಾದಿಗೆ ಅಪಾರ ತೊಂದರೆ ಮತ್ತು ಆರ್ಥಿಕ ನಷ್ಟವನ್ನು ಉಂಟುಮಾಡಿರುತ್ತದೆ, ಅರ್ಜಿದಾರರು ಸ್ವತ್ತಿನ ಮೇಲೆ ಯಾವುದೇ ಹಕ್ಕು, ಒಡೆತನ ಮತ್ತು ಹಿತಾಸಕ್ತಿಯನ್ನು ಹೊಂದಿಲ್ಲ, 2 ನೇ ಪ್ರತಿವಾದಿಯು ಪ್ರಾಮಾಣಿಕ ಖರೀದಿದಾರರಾಗಿರುವುದರಿಂದ ಕ್ರಯಪತ್ರವನ್ನು ರದ್ದುಗೊಳಿಸಲಾಗುವುದಿಲ್ಲ, 2 ನೇ ಪ್ರತಿವಾದಿಯು ತಾನು ಕಷ್ಟಪಟ್ಟು ದುಡಿದ ಹಣವನ್ನು ಹೂಡಿದ್ದು ತಡೆಯಾಜ್ಞೆ ಆದೇಶದಿಂದಾಗಿ ಹೇಳಲಾಗದ ತೊಂದರೆ ಅನುಭವಿಸಿರುತ್ತಾರೆ ಮತ್ತು ತನ್ನ ಸ್ವಂತ ಸ್ವತ್ತನ್ನು ಅನುಭವಿಸುವುದರಿಂದ ವಂಚಿತನಾಗಿರುತ್ತಾರೆ, ಎಂದು ಹೇಳಿರುತ್ತಾರೆ. ವಾದಿಯು ಮೇಲ್ನೋಟದ ದಾವೆಯನ್ನು ಸಾಬೀತುಪಡಿಸಿಲ್ಲ, ಅನುಕೂಲತೆಯ ಒಲವು ಸಹ 2 ನೇ ಪ್ರತಿವಾದಿಯ ಪರವಾಗಿರುತ್ತದೆ, ಒಂದು ವೇಳೆ ಅರ್ಜಿಯಲ್ಲಿ ಕೋರಿರುವಂತೆ ತಡೆಯಾಜ್ಞೆ ಪರಿಹಾರವನ್ನು ನೀಡಿದ್ದೆ ಆದಲ್ಲಿ 2 ನೇ ಪ್ರತಿವಾದಿಯು ಸರಿಪಡಿಸಲಾಗದ ನಷ್ಟ ಮತ್ತು ತೊಂದರೆಗೀಡಾಬೇಕಾಗುತ್ತದೆ, ಅರ್ಜಿದಾರರು ಸ್ವತ್ತಿಗೆ ಅಪರಿಚಿತರಾಗಿದ್ದು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ, ಎಂದು ಹೇಳುತ್ತಾ, ಮಧ್ಯಂತರ ಅರ್ಜಿಯನ್ನು ವೆಚ್ಚದ ಸಹಿತ ವಜಾಗೊಳಿಸುವಂತೆ ಕೇಳಿಕೊಂಡಿರುತ್ತಾರೆ.

**6.** 2 ನೇ ಪ್ರತಿವಾದಿ ಪರ ವಕೀಲರು ನ್ಯಾಯಾಲಯಕ್ಕೆ ಈ ಕೆಳಗಿನ ತೀರ್ಪುಗಳನ್ನು ಹಾಜರುಪಡಿಸಿರುತ್ತಾರೆ.

1. Civil Appeal No.1382/2022 dated 03.03.2022 of Supreme Court of India (Padhiyar Prahladji Chenaji-Vs-Maniben Jagmalbhai (deceased) through LRs and others)
2. 2006(1) KLJ 569 (Shivappa-Vs-the Administrator, Mahadev Textile Mills, Hubli)
3. AIR 1993 Supreme Court 957 (Vinay Krishna-Vs-Keshav Chandra and another)
4. AIR 1989 Supreme Court 1809
5. 1975(2) KLJ 468 (The Church of our Lady of Immaculate Conception-Vs-State of Mysore and another)
6. 1965 (1) MLJ 370 (Lakshminarasimhiah and others-Vs-Yalakki Gowda)
7. ILR 1988 KAR 3035 (Narayan Mukund Shet-Vs-Narayan Nagesh Shetty)

8. 2008(3) KCCR Page 1769 (Anathula Sudhakar-Vs-P.Buchi Reddy (dead) by LRs and others)

**7.** ಅರ್ಜಿ ಮತ್ತು ಪ್ರತ್ಯರ್ಜಿಯಲ್ಲಿನ ಸಂಗತಿಗಳನ್ನು ಗಮನಿಸಿದ ನಂತರ ಅರ್ಜಿಯ ನ್ಯಾಯೋಚಿತ ಇತ್ಯರ್ಥಕ್ಕಾಗಿ ನ್ಯಾಯಾಲಯದ ಪರಿಗಣನೆಗೆ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

## ಃ ಅಂ ಶ ಗ ಳು ಃ

*1) 2ನೇ ಪ್ರತಿವಾದಿಯ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆ ಪರಿಹಾರ ಕೇಳಲು ಮೇಲ್ನೋಟದ ದಾವೆ ಇದೆ ಎಂದು ವಾದಿ ಸಾಬೀತು ಪಡಿಸುವರೇ?*

*2) ಒಂದೊಮ್ಮೆ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆಯೇ?*

*3) ಅನುಕೂಲತೆಯ ಸಮಾನತೆ ಅಥವಾ ಒಲವು ಯಾರ ಪರವಾಗಿ ವಾಲುತ್ತದೆ?*

*4) ಯಾವ ಆದೇಶ ?*

**8.** ವಾದವನ್ನು ಆಲಿಸಿದ ನಂತರ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿ ಸಾಕ್ಷಿ ವಿಚಾರಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಮೇಲಿನ ಅಂಶಗಳಿಗೆ ಈ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸಲಾಗಿದೆಃ-

ಅಂಶ ಸಂಖ್ಯೆ 1 ಃ **ನಕಾರಾತ್ಮಕವಾಗಿ**
ಅಂಶ ಸಂಖ್ಯೆ 2 ಃ **ನಕಾರಾತ್ಮಕವಾಗಿ**
ಅಂಶ ಸಂಖ್ಯೆ 3 ಃ **ನಕಾರಾತ್ಮಕವಾಗಿ**
ಅಂಶ ಸಂಖ್ಯೆ 4 ಃ ಅಂತಿಮ ಆದೇಶದ ಮೇರೆಗೆ ಈ ಕೆಳಕಂಡಂತೆ;

## ಃ ಕಾ ರ ಣ ಗ ಳು ಃ

**9.** **ಅಂಶ ಸಂಖ್ಯೆ 1 ರಿಂದ 3 ಃ** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಒಂದು ಅಂಶದ ಮೇಲಿನ ಚರ್ಚೆಯು ಮತ್ತೊಂದು ಅಂಶದಲ್ಲಿ ಪುನರಾವರ್ತನೆಯಾಗುವ ಕಾರಣ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**10.** ತಾತ್ಕಾಲಿಕ ನಿರ್ಬಂಧಕಾಜ್ಞೆ ಅರ್ಜಿಯನ್ನು ತೀರ್ಮಾನಿಸುವಾಗ ನ್ಯಾಯಾಲಯವು ಸದರಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡುವುದರಿಂದ

ಯಾವ ರೀತಿಯ ಪರಿಣಾಮ ಪಕ್ಷಗಾರರ ಮೇಲಿನ ಹಿತಾಸಕ್ತಿ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ ಎಂಬುದನ್ನು ಪರಿಗಣಿಸುವುದು ಅವಶ್ಯವಿರುತ್ತದೆ. ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವು ನ್ಯಾಯ ಸಮ್ಮತವಾದ ಪರಿಹಾರವಾಗಿದ್ದು, ಸದರಿ ಪರಿಹಾರವನ್ನು ನೀಡುವುದು ನ್ಯಾಯಾಲಯದ ವಿವೇಚನಾತ್ಮಕವಾದ ಅಧಿಕಾರ -ವಾಗಿರುತ್ತದೆ. ಆದರೆ ಸದರಿ ವಿವೇಚನಾತ್ಮಕ ಅಧಿಕಾರವನ್ನು ನ್ಯಾಯಾಲಯವು ನಿರಂಕುಶ ರೀತಿಯಲ್ಲಿ ಚಲಾಯಿಸುವಂತಾಗಿರುವುದಿಲ್ಲ, ಅಂದರೆ ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕಾದರೆ ವಾದಿಯು ನ್ಯಾಯಾಲಯಕ್ಕೆ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸುವರೇ? ಅನುಕೂಲತೆಯ ಒಲವು ತನ್ನ ಪರವಾಗಿದೆಯೇ? ಮತ್ತು ಅರ್ಜಿಯನ್ನು ವಜಾಗೊಳಿಸುವುದರಿಂದ ತನಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ? ಎಂದು ನಿರೂಪಿಸಬೇಕಾಗುತ್ತದೆ. ಪ್ರಸ್ತುತ ಅಂಶದಲ್ಲಿ ಈ ನ್ಯಾಯಾಲಯವು ವಾದಿಯು ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ನ್ಯಾಯಾಲಯಕ್ಕೆ ತೋರ್ಪಡಿಸಿದ್ದಾನೆಯೇ ಎನ್ನುವ ಅಂಶವನ್ನು ಪರಿಗಣಿಸಲು ಮುಂದಾಗಿರುತ್ತದೆ.

**11.** ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಎಂದರೆ ನ್ಯಾಯಾಲಯಕ್ಕೆ ವಾದಿಯು ತಂದಿರುವ ವ್ಯಾಜ್ಯದಲ್ಲಿ ತಿರುಳಿದ್ದು, ಸದರಿ ವ್ಯಾಜ್ಯವನ್ನು ಸದುದ್ದೇಶದಿಂದ ಮಾಡಿದ್ದು, ವಾದಿಯ ವ್ಯಾಜ್ಯವು ವಿಚಾರಣೆಗೆ ಯೋಗ್ಯವಾಗಿದೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾಗಬೇಕಾಗುತ್ತದೆ. ಮುಂದುವರೆದು, ವಾದಿಯು ಈ ನ್ಯಾಯಾಲಯದಿಂದ ಅಂತಿಮ ಪರಿಹಾರವನ್ನು ಪಡೆದುಕೊಳ್ಳುವ ಸಂಭವವಿರುತ್ತದೆ ಎನ್ನುವ ವಿಚಾರವು ಸಹ ಮೊದಲ ನೋಟಕ್ಕೆ ಕಾಣಿಸಬೇಕಾಗಿರುವುದು ಅವಶ್ಯವಿರುತ್ತದೆ. ಅಂದರೆ ವಾದಿಯು ಮೊದಲ ನೋಟಕ್ಕೆ ಹಕ್ಕು ತನ್ನ ಪರವಾಗಿದ್ದು ಸದರಿ ಮೊದಲ ನೋಟದ ಹಕ್ಕನ್ನು ಪ್ರತಿವಾದಿಯು ಅತಿಕ್ರಮಣ ಮಾಡಿದ್ದಾನೆಂದು ನ್ಯಾಯಾಲಯದ ಗಮನಕ್ಕೆ ಬಂದರೆ ನ್ಯಾಯಾಲಯವು ವಾದಿಯ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬಹುದಾಗಿರುತ್ತದೆ. ತನ್ನ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಇದೆ ಎನ್ನುವುದನ್ನು ಈ ಹಂತದಲ್ಲಿ ತೋರ್ಪಡಿಸುವ ಹೊಣೆಗಾರಿಕೆ ವಾದಿಯ ಮೇಲಿರುತ್ತದೆ. ಈ ನ್ಯಾಯಾಲಯವು ಸ್ಪಷ್ಟಪಡಿಸುವುದೇನೆಂದರೆ, ಈ ಹಂತದಲ್ಲಿ ನ್ಯಾಯಾಲಯವು **ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಮಾತ್ರ ಪರಿಶೀಲಿಸಿದ್ದು ಪಕ್ಷಗಾರರ ಮೊದಲ ನೋಟದ ಸ್ವಾಮ್ಯವನ್ನಲ್ಲ, ಈ ಹಂತದಲ್ಲಿ ನ್ಯಾಯಾಲಯವು ದೀರ್ಘವಾದ ವಿಚಾರಣೆಯನ್ನು ಮಾಡುವುದು ನಿಷಿದ್ಧವಾಗಿದ್ದು, ಪಕ್ಷಗಾರರ ದಾವಾಸ್ತಿ ಮತ್ತು ಪ್ರತಿವಾದಿಯ ಆಸ್ತಿಗಳ ಮೇಲಿನ ಸ್ವಾಮ್ಯದ ಬಗ್ಗೆಯೇ ಚರ್ಚಿಸುವ ಹಾಗಿಲ್ಲ.** ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ನ್ಯಾಯಾಲಯವು ವಾದಿಯು ಸಲ್ಲಿಸಿರುವ ಅರ್ಜಿ ಮತ್ತು ಪ್ರಾರ್ಥಿಸಿರುವ ಪರಿಹಾರವನ್ನು ಗಮನಿಸುತ್ತಾ, ವಾದಿಯು ಸದರಿ ಅರ್ಜಿಯಲ್ಲಿ ಪ್ರಾರ್ಥಿಸಿರುವಂತೆ ಪರಿಹಾರವನ್ನು

ಪಡೆಯಲು ಅರ್ಹನೇ ಎಂಬುದನ್ನು ನಿರ್ಣಯಿಸಬೇಕಾಗುತ್ತದೆ.

**12.** ತಾತ್ಕಾಲಿಕ ನಿರ್ಬಂಧಕಾಜ್ಞೆ ಪರಿಹಾರವನ್ನು ಕೋರುವ ಪಕ್ಷಗಾರನು ಪ್ರಸ್ತುತ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದೇನೆ ಎಂದು ನ್ಯಾಯಾಲಯಕ್ಕೆ ತೋರ್ಪಡಿಸುವ ಅವಶ್ಯಕತೆ ಇರುತ್ತದೆ. ವಾದಿಯು ನ್ಯಾಯಾಲಯಕ್ಕೆ **1980** ರಿಂದ **2001** ರವರೆಗಿನ ಕೈಬರಹದ ಪಹಣಿಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ. ಆದರೆ, ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಸ್ತುತ ಪಹಣಿಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮುಂದುವರೆದು, ವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಲ್ಲಿ **3** ನೇ ದಾಖಲೆಯನ್ನು ನ್ಯಾಯಾಲಯವು ಪರಿಶೀಲಿಸಿದಾಗ, **3** ನೇ ದಾಖಲೆಯು ದಾವಾ ಸ್ವತ್ತಿನ ಪ್ರಸ್ತುತ ಪಹಣಿಸಿಪತ್ರಿಕೆಯಾಗಿದ್ದು, ಸದರಿ ಪಹಣಿಪತ್ರಿಕೆಯ ಕಾಲಂ ನಂ.**9** ರಲ್ಲಿ **2** ನೇ ಪ್ರತಿವಾದಿಯ ಹೆಸರು ನಮೂದು ಆಗಿರುವುದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ಇದರಿಂದ, ಪ್ರಸ್ತುತ ದಾವಾ ಸ್ವತ್ತಿನಲ್ಲಿ **2** ನೇ ಪ್ರತಿವಾದಿಯು ಸ್ವಾಧೀನದಲ್ಲಿದ್ದಾರೆ ಎಂಬ ಅಂಶ ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ.

**13.** ವಾದಿಯು ತನ್ನ ಪ್ರಮಾಣ ಪತ್ರದಲ್ಲಿ, ದಾವಾ ಸ್ವತ್ತು ಮೂಲತಃ ತನ್ನ ಅಜ್ಜನಾದ ದಿವಂಗತ ಫ್ರಾನ್ಸಿಸ್ ಕೊರಿಯಾರವರಿಗೆ ಸೇರಿದ್ದಾಗಿರುತ್ತದೆ. ವಾದಿಯ ಅಜ್ಜನಿಗೆ ಒಟ್ಟು ಏಳು ಜನ್ನ ಮಕ್ಕಳು. ಅವರಲ್ಲಿ ವಾದಿಯ ತಂದೆಯಾದ ದಿವಂಗತ ಜೊಸೇಫ್ ಕೊರಿಯಾ ರವರು ಒಬ್ಬರಾಗಿದ್ದು, ವಾದಿಯು ದಿವಂಗತ ಜೊಸೇಫ್ ಕೊರಿಯಾ ರವರ ಮಗನಾಗಿರುತ್ತಾನೆ. ಜೊಸೇಫ್ ಕೊರಿಯ ರವರಿಗೆ ಒಟ್ಟು ಏಳು ಜನ ಮ್ಮಕಳು. ಆ ಏಳು ಜನ ಮಕ್ಕಳಲ್ಲಿ ವಾದಿಯು ಸಹ ಒಬ್ಬರಾಗಿದ್ದಾರೆ. ವಾದಿಯ ಅಜ್ಜನಾದ ದಿವಂಗತ ಫ್ರಾನ್ಸಿಸ್ ಕೊರಿಯಾರವರು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವೀಲುನಾಮೆಯನ್ನು ಬರೆಯದೆ ತನ್ನ ಏಳು ಜನ ಮ್ಮಕಳನ್ನು ವಾರಾಸುದಾರರನ್ನಾಗಿ ಬಿಟ್ಟು ಮರಣ ಹೊಂದಿದ್ದು ಅವರೆಲ್ಲರೂ ತಮ್ಮ ತಮ್ಮ ಕಾನೂನಾತ್ಮಕ ವಾರಾಸುದಾರರನ್ನು ಬಿಟ್ಟು ಮರಣ ಹೊಂದಿರುತ್ತಾರೆ. ವಾದಿಯ ತಂದೆ ಜೊಸೇಫ್ ಕೊರಿಯಾರವರ ಮರಣದ ನಂತರ ಜೊಸೇಫ್ ಕೊರಿಯಾರವರ ಇತರ ಮ್ಮಕಳೊಂದಿಗೆ ವಾದಿಯು ಜಂಟಿಯಾಗಿ ದಾವಾ 'ಎ' ಅನುಸೂಚಿತ ಸ್ವತ್ತಿನಲ್ಲಿ **1/7** ನೇ ಭಾಗಾಂಶದ ಹಕ್ಕಿಗೆ ಅರ್ಹರಾಗಿರುತ್ತಾರೆ, ಎಂದು ಹೇಳಿರುತ್ತಾರೆ.

**14.** ಮುಂದುವರೆದು, ಪ್ರತಿವಾದಿಗಳು ದಾವಾ ಸ್ವತ್ತಿಗೆ ಅಪರಿಚಿತ ವ್ಯಕ್ತಿಗಳಾಗಿದ್ದು, ನೋಂದಣಿ ಪ್ರಾಧಿಕಾರದ ಮುಂದೆ **1** ನೇ ಪ್ರತಿವಾದಿಯು ತಪ್ಪಾಗಿ ಪ್ರತಿನಿಧಿಸುವುದರ (impersonation) ಮೂಲಕ ಮೋಸದಿಂದ ಮತ್ತು ಕಾನೂನುಬಾಹಿರವಾಗಿ ದಿನಾಂಕ **29-07-2024** ರಂದು ದಸ್ತಾವೇಜು ಸಂಖ್ಯೆ **MDB-1-01784-2024-25** ರಂತೆ ನೋಂದಾಯಿತ

ಕ್ರಯಪತ್ರ ಎಂಬ ನಕಲಿ ದಾಖಲೆಯನ್ನು **2 ನೇ** ಪ್ರತಿವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುತ್ತಾರೆ. **1 ನೇ** ಪ್ರತಿವಾದಿಯು ಮೋಸಗಾರನಾಗಿದ್ದು ದಿನಾಂಕ **29-07-2024** ರಂದು ನೋಂದಣಿಯಾಗಿರುವ ಕ್ರಯಪತ್ರದಲ್ಲಿ ವಾದಿಯ ಅಜ್ಜನಾದ ದಿವಂಗತ ಫ್ರಾನ್ಸಿಸ್ ಕೊರಿಯಾರವರನ್ನು ಮಾರಾಟಗಾರರಂತೆ ವ್ಯಕ್ತೀಕರಣಗೊಳಿಸಿ (impersonation) ನಕಲಿ ದಾಖಲೆಗಳನ್ನು ಸೃಷ್ಟಿಸುವ ಮೂಲಕ ಸಂಬಂಧಪಟ್ಟ ಪ್ರಾಧಿಕಾರದ ದಾರಿ ತಪ್ಪಿಸಿರುತ್ತಾರೆ. ದಿನಾಂಕ **10-04-2024** ರಂದು DR No.315/33 ರಂತೆ ದಾವಾ ಸ್ವತ್ತು ಮಂಜೂರಾಗಿದ್ದ ಫ್ರಾನ್ಸಿಸ್ ಕೊರಿಯಾರವರು ಬಹಳ ಹಿಂದೆಯೇ ಮರಣ ಹೊಂದಿರುತ್ತಾರೆ. ಆದಕಾರಣ, ಪ್ರತಿವಾದಿಗಳು ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಕಾನೂನುಬಾಹಿರವಾಗಿ ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತಾರೆ. ಆದಕಾರಣ, ಸದರಿ ಕ್ರಯಪತ್ರ ಸೃಷ್ಟಿ ಮಾಡಲಾದ ನಕಲಿ ದಾಖಲೆಯಾಗಿರುತ್ತದೆ ಎಂದು ಹೇಳಿರುತ್ತಾರೆ. ಆದರೆ, **2 ನೇ** ಪ್ರತಿವಾದಿಯು ತಾತ್ಕಾಲಿಕ ಮಧ್ಯಂತರ ಅರ್ಜಿಗೆ ತನ್ನ ಆಕ್ಷೇಪಣೆಯನ್ನು ಸಲ್ಲಿಸಿ, ದಾವಾ ಸ್ವತ್ತನ್ನು ಸೂಕ್ತವಾದ ಮಾರುಕಟ್ಟೆ ಮೌಲ್ಯವನ್ನು ಮಾರಾಟಗಾರರಿಗೆ ಪಾವತಿ ಮಾಡುವುದರ ಮೂಲಕ ನೋಂದಾಯಿತ ಕ್ರಯಪತ್ರದ ಅಡಿಯಲ್ಲಿ ದಾವಾ ಸ್ವತ್ತನ್ನು **2 ನೇ** ಪ್ರತಿವಾದಿಯು ಖರೀದಿಸಿರುವುದಾಗಿ ಮತ್ತು ಸದರಿ ಕ್ರಯಪತ್ರದ ಆಧಾರದ ಮೇಲೆ ದಾವಾ ಸ್ವತ್ತಿನ ಪಹಣಿಪತ್ರಿಕೆಯನ್ನು **2 ನೇ** ಪ್ರತಿವಾದಿಯ ಹೆಸರು ನಮೂದು ಆಗಿದ್ದು, ಪ್ರಸ್ತುತ **2 ನೇ** ಪ್ರತಿವಾದಿಯು ದಾವಾ ಸ್ವತ್ತಿನ ಮಾಲೀಕರಾಗಿ ಸಂಪೂರ್ಣ ಶಾಂತಿಯುತ ಸ್ವಾಧೀನಾನುಭವದಲ್ಲಿದ್ದಾರೆ, ಎಂದು ಹೇಳಿರುತ್ತಾರೆ.

**15.** **2 ನೇ** ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ದಾವಾ ಸ್ವತ್ತಿಗೆ ಸಂಬಂಧಿಸಿದ ಪ್ರಸ್ತುತ ಪಹಣಿಪತ್ರಿಕೆಯಲ್ಲಿ **2 ನೇ** ಪ್ರತಿವಾದಿಯ ಹೆಸರು ನಮೂದು ಆಗಿರುವ ಕಾರಣ, **2 ನೇ** ಪ್ರತಿವಾದಿಯು ದಾವಾ ಸ್ವತ್ತಿನ ನಿಜವಾದ ಮಾಲೀಕರು ಆಗಿರುತ್ತಾರೆ. ಆದಕಾರಣ, ನಿಜವಾದ ಮಾಲೀಕರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲು ಬರುವುದಿಲ್ಲ, ಎಂದು ತಮ್ಮ ವಾದಮಂಡನೆ ಮಾಡಿರುತ್ತಾರೆ. ಮುಂದುವರೆದು, **2 ನೇ** ಪ್ರತಿವಾದಿ ಪರ ವಕೀಲರು ನ್ಯಾಯಾಲಯಕ್ಕೆ, ದಾವಾ ಸ್ವತ್ತನ್ನು **2 ನೇ** ಪ್ರತಿವಾದಿಯು **1 ನೇ** ಪ್ರತಿವಾದಿ ಕಡೆಯಿಂದ ಖರೀದಿ ಮಾಡಿರುವ ಕ್ರಯಪತ್ರ, ದಿನಾಂಕ **11-11-2024** ರಂದು ಹಿರಿಯ ಭೂ-ವಿಜ್ಞಾನಿ ಗಣಿ ಮತ್ತು ಭೂ-ವಿಜ್ಞಾನ ಇಲಾಖೆ, ಮಂಗಳೂರು ರವರು **2 ನೇ** ಪ್ರತಿವಾದಿಯ ಪರವಾಗಿ ನೀಡಿರುವ ಕಾರ್ಯಾನುಮತಿ ಪತ್ರ ಮತ್ತು ದಾವಾ ಸ್ವತ್ತಿನಲ್ಲಿ ಕೆಂಪು ಕಲ್ಲನ್ನು ಭೂ-ವಿಜ್ಞಾನ ಇಲಾಖೆಯು ಅನುಮತಿ ನೀಡಿರುವುದಕ್ಕೆ ಸಂಬಂಧಿಸಿದಂತೆ ಫಲಕವು ದಾವಾ ಸ್ವತ್ತಿನಲ್ಲಿ ಕಂಡುಬರುತ್ತದೆ ಎಂಬುದನ್ನು ನ್ಯಾಯಾಲಯಕ್ಕೆ ತೋರ್ಪಡಿಸಲು ಛಾಯಚಿತ್ರಗಳನ್ನು ಹಾಜರುಪಡಿಸಿರುತ್ತಾರೆ. ಈ ದಾಖಲೆಗಳನ್ನು ಪರಿಶೀಲಿಸಿದಾಗ, ದಿನಾಂಕ **11-11-2024** ರಂದು ಹಿರಿಯ ಭೂ-ವಿಜ್ಞಾನಿ ಗಣಿ ಮತ್ತು ಭೂ-ವಿಜ್ಞಾನ ಇಲಾಖೆ, ಮಂಗಳೂರು ರವರು, ದಾವಾ ಸ್ವತ್ತಿನಲ್ಲಿ ದಿನಾಂಕ **11-11-2024** ರಿಂದ **10-05-2025** ರವರೆಗೆ ಸರ್ವೆ

ನಂ.215/1 ಎ ರಲ್ಲಿ 0.40 ಎಕರೆ ವಿಸ್ತೀರ್ಣದ ಜಾಗದಲ್ಲಿ ಸಮತಟ್ಟು ಮಾಡುವ ಸಲುವಾಗಿ ಜಮೀನಿನಲ್ಲಿರುವ ಕೆಂಪು ಕಲ್ಲನ್ನು ತೆಗೆಯಲು ಕೆಲವೊಂದು ಷರತ್ತುಗಳ ಮೇರೆಗೆ ಅನುಮತಿ ನೀಡಿರುವುದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ 2 ನೇ ಪ್ರತಿವಾದಿಯು ಒಟ್ಟು ರೂ.85,700/- ಗಳನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಪಾವತಿ ಮಾಡಿರುವುದು 2 ನೇ ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಿಂದ ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ.

**16.** ದಿನಾಂಕ 14-02-2025 ರಂದು ವಾದಿ ಪರ ವಕೀಲರು ನ್ಯಾಯಾಲಯಕ್ಕೆ, ಫ್ರಾನ್ಸಿಸ್ ಕೊರಿಯಾರವರ ಪರವಾಗಿ ಆದ ದರ್ಖಾಸ್ತು ಆದೇಶ ಮತ್ತು ಲಗತ್ತು ನಕ್ಷೆ, ಜೋಸೇಫ್ ಕೊರಿಯರವರ ಮೂಲ ಜನನ ಪ್ರಮಾಣ ಪತ್ರ, ಜೋಸೇಫ್ ಕೊರಿಯಾರವರ ಮೂಲ ಮರಣ ಪ್ರಮಾಣ ಪತ್ರ, ಫ್ರಾನ್ಸಿಸ್ ಕೊರಿಯಾರವರು ಪಾವತಿ ಮಾಡಿರುವ ಕಂದಾಯ ರಸೀಧಿಗಳು ಮತ್ತು 2022-23, 2023-24 ನೇ ಇಸವಿಯ ಪಹಣಿಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ವಾದಿಯು ಹಾಜರುಪಡಿಸಿರುವ ಪಹಣಿಪತ್ರಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಪಹಣಿಪತ್ರಿಕೆಯ ಕಾಲಂ ನಂ.9 ರಲ್ಲಿ ಪ್ರಾಂಶೀಶ್ ಕುವೆಲ್ ಎಂದು ನಮೂದು ಆಗಿರುವುದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ಆದರೆ, ಸದರಿ ಪಹಣಿಪತ್ರಿಕೆಯ ಮೇಲ್ಭಾಗದಲ್ಲಿ valid from 2001-08-16 to 2024-08-12 ಎಂದು ನಮೂದು ಆಗಿರುವುದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ಅಂದರೆ, ದಿನಾಂಕ 29-07-2024 ರಂದು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಕಡೆಯಿಂದ ನೋಂದಾಯಿತ ಕ್ರಯಪತ್ರದ ಅಡಿಯಲ್ಲಿ ದಾವಾ ಸ್ವತ್ತನ್ನು ಖರೀದಿಸಿದ ನಂತರ ಪಹಣಿಪತ್ರಿಕೆಯು 2 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆಯಾಗಿರುತ್ತದೆ. 2 ನೇ ಪ್ರತಿವಾದಿಯ ಹೆಸರು ನಮೂದು ಆಗಿರುವ ಪಹಣಿಪತ್ರಿಕೆಯನ್ನು ಗಮನಿಸಿದಾಗ, ಸದರಿ ಪಹಣಿಪತ್ರಿಕೆಯ ಮೇಲ್ಭಾಗದಲ್ಲಿ valid from 12-08-2024 to till date ಎಂದು ನಮೂದು ಆಗಿರುವುದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ಆದಕಾರಣ, ದಾವಾ ದಿನಾಂಕದಂದು 2 ನೇ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುವುದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ.

**17.** ವಾದಿಯು, ತನ್ನ ಅರ್ಜಿ ಪ್ರಮಾಣ ಪತ್ರದಲ್ಲಿ, ನೋಂದಣಿ ಪ್ರಾಧಿಕಾರದ ಮುಂದೆ 1 ನೇ ಪ್ರತಿವಾದಿಯು ತಪ್ಪಾಗಿ ಪ್ರತಿನಿಧಿಸುವುದರ (impersonation) ಮೂಲಕ ಮೋಸದಿಂದ ಮತ್ತು ಕಾನೂನುಬಾಹಿರವಾಗಿ ದಿನಾಂಕ 29-07-2024 ರಂದು ದಸ್ತಾವೇಜು ಸಂಖ್ಯೆ MDB-1-01784-2024-25 ರಂತೆ ನೋಂದಾಯಿತ ಕ್ರಯಪತ್ರ ಎಂಬ ನಕಲಿ ದಾಖಲೆಯನ್ನು 2 ನೇ ಪ್ರತಿವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುತ್ತಾರೆ. 1 ನೇ ಪ್ರತಿವಾದಿಯು ಮೋಸಗಾರನಾಗಿದ್ದು ದಿನಾಂಕ 29-07-2024 ರಂದು ನೋಂದಣಿಯಾಗಿರುವ ಕ್ರಯಪತ್ರದಲ್ಲಿ ವಾದಿಯ ಅಜ್ಜನಾದ ದಿವಂಗತ ಫ್ರಾನ್ಸಿಸ್

ಕೊರಿಯಾರವರನ್ನು ಮಾರಾಟಗಾರರಂತೆ ವ್ಯಕ್ತೀಕರಣಗೊಳಿಸಿ (impersonation) ನಕಲಿ ದಾಖಲೆಗಳನ್ನು ಸೃಷ್ಟಿಸುವ ಮೂಲಕ ಸಂಬಂಧಪಟ್ಟ ಪ್ರಾಧಿಕಾರದ ದಾರಿ ತಪ್ಪಿಸಿರುತ್ತಾರೆ, ಎಂದು ಹೇಳಿರುವುದರಿಂದ ಮತ್ತು ಈ ಅಂಶವನ್ನು ರುಜುವಾತು ಪಡಿಸಲು ಇನ್ನೂ ಹಲವಾರು ದಾಖಲೆಗಳು ಹಾಗೂ ವಾದಿಯ ಸಾಕ್ಷ್ಯ ವಿಚಾರಣೆಯ ಅಗತ್ಯ ಇದೆ ಎಂದು ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಈಗಾಗಲೇ ವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಲ್ಲಿ ವಾದಿಯ ಅಜ್ಜನ ಹೆಸರು ಫ್ರಾನ್ಸಿಸ್ ಕೊರಿಯಾ ಎಂದು ನಮೂದು ಆಗಿದೆ ಎಂದು ವಾದಿಯು ಹೇಳುತ್ತಿರುವ ಕಾರಣ, ಈ ಅಂಶವನ್ನು ರುಜುವಾತು ಪಡಿಸಲು ಸಹ ಹೆಚ್ಚಿನ ಸಾಕ್ಷ್ಯದ ವಿಚಾರಣೆ ಅಗತ್ಯ ಇದೆ. ವಾದಿಯು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಿಂದ ಈ ದಾವೆಯು ವಿಚಾರಣೆಗೆ ಸೂಕ್ತವಾದ ದಾವೆ ಎಂದು ನ್ಯಾಯಾಲಯಕ್ಕೆ ಕಂಡುಬಂದಿದ್ದರೂ ಸಹ, ಪ್ರಸ್ತುತ ದಾವಾ ಸ್ವತ್ತಿನಲ್ಲಿ 2 ನೇ ಪ್ರತಿವಾದಿಯು ಸ್ವಾಧೀನದಲ್ಲಿರುವುದು ನ್ಯಾಯಾಲಯಕ್ಕೆ ಕಂಡುಬಂದಿರುವುದರಿಂದ ಮತ್ತು ಈಗಾಗಲೇ 2 ನೇ ಪ್ರತಿವಾದಿಯು ರೂ.85,700/- ಗಳನ್ನು ಭೂ-ವಿಜ್ಞಾನ ಇಲಾಖೆಗೆ ಪಾವತಿ ಮಾಡಿ ಕೆಂಪು ಕಲ್ಲನ್ನು ತೆಗೆಯಲು ಅನುಮತಿ ಪಡೆದುಕೊಂಡಿರುವುದರಿಂದ, ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿದರೆ 2 ನೇ ಪ್ರತಿವಾದಿಯು ಹೆಚ್ಚಿನ ಹಾನಿ ಮತ್ತು ಅನಾನುಕೂಲಕ್ಕೆ ಒಳಗಾಗುವ ಸಂಭವ ಇದೆ ಎಂದು ಪರಿಗಣಿಸುತ್ತಾ, **ಅಂಶ ಸಂಖ್ಯೆ 1 ರಿಂದ 3** ಗಳನ್ನು **ನಕಾರಾತ್ಮಕವಾಗಿ** ಉತ್ತರಿಸುತ್ತದೆ.

**18. ಅಂಶ ಸಂಖ್ಯೆ 4** ಃ- ಮೇಲ್ಕಾಣಿಸಿದ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಾಣಿಸಿದಂತೆ,

**-ಃ ಆದೇಶ ಃ-**

**ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಮತ್ತು ಕಲಂ 151 ರಡಿಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ವಜಾಗೊಳಿಸಲಾಗಿದೆ.**

*(ಶೀಘ್ರಲಿಪಿಗಾರಳಿಗೆ ನೇರ ಗಣಕಯಂತ್ರಕ್ಕೆ ಉಕ್ತಲೇಖನ ನೀಡಿದ್ದು, ಆಕೆಯು ಬೆರಳಚ್ಚು ಮಾಡಿದ್ದು, ತಪ್ಪುಗಳನ್ನು ತಿದ್ದುಪಡಿ ಮಾಡಿದ ನಂತರ ದಿನಾಂಕ 18 ನೇ ಮಾರ್ಚ್, 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)*

KAVERAMMA M
Digitally signed by KAVERAMMA M
Date: 2025.03.21 13:24:46 +0530

**(ಕಾವೇರಮ್ಮ ಎಂ.)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಮೂಡಬಿದ್ರೆ